ವಸ್ತುಗಳು ಹಗುರವಾದ ಪುಟ್ಟಿಗಳಲ್ಲಿ ಮಾರಾಟವಾಗುತ್ತವೆ. ಅಂದು ಬೀದಿಗಳು ಎಲ್ಲಾ ದಿನಕ್ಕಿಂತಲೂ ಹೆಚ್ಚು ಕಿಕ್ಕಿರಿದಿರುತ್ತವೆ. ಶನಿವಾರ ಬಡ ಜನರು ಖರ್ಚು ಮಾಡಲು ಸಾಧ್ಯವಾಗುತ್ತದೆ. ಅಂದು ಅವರು ತಮ್ಮ ಸಂಬಳದ ಹಣ ಪಡೆದಿರುತ್ತಾರೆ.

ಕೇಕನ್ನು ತಯಾರು ಮಾಡುವ ಪದಾರ್ಥಗಳಾದ ಹಿಟ್ಟು, ಸಕ್ಕರೆ, ಮೊಟ್ಟೆ ಮತ್ತಿತರ ಪದಾರ್ಥಗಳನ್ನು ಅಲ್ಲಿ ಓರಣವಾಗಿ ಜೋಡಿಸಿದ್ದರು. ಆಗ ತಾನೇ ಮಾಡಿದ ಹಲವಾರು ಕೇಕುಗಳನ್ನು ಟಿನ್ನುಗಳಲ್ಲಿ ಜೋಡಿಸಿಡಲಾಗಿತ್ತು. 'ನಿಮಗೆ ಈ ಸಣ್ಣ ಅಡುಗೆ ಮನೆಯಲ್ಲಿ ಕುಳಿತು ಕೊಳ್ಳುವುದು ಖುಷಿ ಎನಿಸುವುದಿಲ್ಲ ಅಲ್ಲವೇ?' ಎಂದ ಕ್ಲಿಫರ್ಡ್, 'ನನ್ನ ಕೆಲಸವನ್ನು ಆದಷ್ಟು ಮುಗಿಸಿದ್ದೇನೆ. ಮ್ಯಾಗಿ ಇವರನ್ನು ಹಾಲ್‌ಗೆ ಕರೆದುಕೊಂಡು ಹೋಗು, ನಾನು ಒಂದು ನಿಮಿಷದಲ್ಲಿ ಬರುತ್ತೇನೆ' ಎಂದರು. 'ಇಲ್ಲ ಇಲ್ಲ ನಾನಿಲ್ಲೇ ಆರಾಮಾಗಿ ಕುಳಿತಿದ್ದೇನೆ' ಎಂದು ಸಮಜಾಯಿಷಿ ನೀಡಿದೆ. 'ನೀವು ಮಾಡುವ ಕೇಕುಗಳು ತುಂಬಾ ಚೆನ್ನಾಗಿರುತ್ತವೆ' ಎಂದು ನಾನು ಮೆಚ್ಚುಗೆ ಸೂಚಿಸಿದೆ. ಮಿಸೆಸ್ ಕ್ಲಿಫರ್ಡ್ ನನ್ನ ಮಾತು ಕೇಳಿ ಸಂತಸದಿಂದ ಮುಗುಳ್ನಕ್ಕರು.

'ಅಮ್ಮ ಒಳ್ಳೆಯ ಮಿಠಾಯಿ ಕೂಡ ಮಾಡುತ್ತಾರೆ. ನೀವು ಅವುಗಳ ರುಚಿ ನೋಡಿ' ಎಂದು ಮ್ಯಾಗಿ ಕಪಾಟನ್ನು ತೆರೆದು ಅವನ್ನು ಕೊಟ್ಟಳು, ನಾನು ಕೆಲವು ತುಣುಕುಗಳನ್ನು ತಿಂದು ಖುಷಿಪಟ್ಟೆ. ಮತ್ತೆ ಅಡುಗೆ ಮಾಡುವುದನ್ನು ಮುಂದುವರಿಸುತ್ತಾ 'ಭಾರತ ಹೇಗಿದೆ ಸಾರ್' ಎಂದು ಕ್ಲಿಫರ್ಡ್ ಕೇಳಿದರು.

'ಸುಂದರವಾದ ದೇಶ.'

'ಸುರಕ್ಷಿತವಾಗಿ ಬದುಕಬಹುದಾ?'

'ಖಂಡಿತವಾಗಿ. ಆದರೆ, ಈ ದೇಶದಷ್ಟು ಚಳಿ ಪ್ರದೇಶ ಅಲ್ಲ. ನಮ್ಮದು ಉಷ್ಣ ದೇಶ.'

'ಅಲ್ಲಿ ಬಹಳಷ್ಟು ಹಾವುಗಳು, ಹುಲಿಗಳು, ಕಾಡು ಪ್ರಾಣಿಗಳು ಇರಬೇಕಲ್ಲ? ಅವು ಜನರನ್ನು ಸಾಯಿಸುವುದಿಲ್ಲವೇ?'

'ಆ ಮಾತುಗಳನ್ನು ನಂಬಬೇಡಿ' ಎಂದು ನಕ್ಕೆ. 'ಹಾವು ಮತ್ತು ಹುಲಿಗಳು ಕಾಡಿನಲ್ಲಿ ಇರುತ್ತವೆ, ಜನನಿಬಿಡ ಪ್ರದೇಶಕ್ಕೆ ಬಂದರೆ ಕೊಲ್ಲಲ್ಪಡುತ್ತವೆ.'

'ಭಾರತದ ಕೆಲವು ಭಾಗಗಳಲ್ಲಿ ಬೇರೆ ಕಡೆಗಿಂತಲೂ ಜನ ಹೆಚ್ಚು. ಇದು ಎಲ್ಲಾ ಕಡೆಗೂ ಒಂದೇ ರೀತಿ ಮತ್ತು ವರ್ಷದುದ್ದಕ್ಕೂ ಇರುವುದಿಲ್ಲ. ನನ್ನ ಮಗ ಪಂಜಾಬ್‌ನಲ್ಲಿದ್ದಾನೆ. ಅವನು ಸೈನಿಕನಾಗಿದ್ದಾನೆ, ಪಂಜಾಬ್ ಯಾವ ರೀತಿಯ ಪ್ರದೇಶ? ಹೇಗಿದೆ? ಪಂಜಾಬ್ ಸುಂದರ ತಾಣ ಅಲ್ಲಿ ಸ್ವಲ್ಪ ಉಷ್ಣಾಂಶ ಇರುತ್ತದೆ ಅದು ಆರೋಗ್ಯಕರವಾಗಿರುತ್ತದೆ. ಇದನ್ನು ಕೇಳಿ ನನಗೆ ಸಮಾಧಾನವಾಯಿತು' ಎಂದರು ಕ್ಲಿಫರ್ಡ.

ಅವಳ ಅಡುಗೆ ಕೆಲಸ ಮುಗಿಯಿತು. 'ಮ್ಯಾಗಿ, ಗುಪ್ತಾರನ್ನು ಮೇಲೆ ಕರೆದುಕೊಂಡು ಹೋಗು, ನಾನು ಕೈ ತೊಳೆದು ಟೀ ತರುತ್ತೇನೆ' ಎಂದರು. ಮ್ಯಾಗಿ ವಿಶ್ರಾಂತಿ ಕೋಣೆಯನ್ನು ತೋರಿಸಿದಳು. ಪೀಠೋಪಕರಣಗಳು ನೋಡುವುದಕ್ಕೆ ತುಂಬಾ ಹಳೆಯದಾಗಿದ್ದವು. ಜಮಖಾನ ಕೂಡ ಹಳೆಯದಾಗಿದ್ದು ಅಲ್ಲಲ್ಲಿ ತೂತು ಬಿದ್ದಿತ್ತು. ಆದರೆ, ಎಲ್ಲದರಲ್ಲಿಯೂ ಚೊಕ್ಕತನವಿತ್ತು. ಮ್ಯಾಗಿ ಕಿಟಕಿಗಳನ್ನು ತೆರೆದು ಪರದೆ ಹಿಂದಕ್ಕೆ ಸರಿಸಿದಳು. ಅಲ್ಲಿ ಪುಸ್ತಕದ ಕಪಾಟು ಇತ್ತು. ನಾನು ಅದರ ಮುಂದುಗಡೆ ನಿಂತೆ.

ಮಿಸೆಸ್ ಕ್ಲಿಫರ್ಡ್ ಕೆಲವು ನಿಮಿಷಗಳ ನಂತರ ಟೀ ಟ್ರೇಯನ್ನು ತಂದರು. ಅಡುಗೆ ಕೋಣೆಯನ್ನು ಸ್ವತಃ ಅವರೇ ಸ್ವಚ್ಛ ಮಾಡುತ್ತಿದ್ದರು. ಟೀ ಕುಡಿಯುತ್ತಾ ಭಾರತದ ಬಗ್ಗೆ ನಾನು ಮಾತಾಡಿದೆ.